ಅ. ದಾ. ಸಂ. **367/2017**
ಡಿ.ಡಬ್ಲ್ಯೂ - **01**

**ದಿನಾಂಕ: 05-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲುಃ- ವಾದಿಯ ಪರ ಶ್ರೀ. ಎಸ್. ಜಿ. ವಿ, ವಕೀಲರಿಂದ:-**

01. ನಾನು 2ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆಯನ್ನು ಅಷ್ಟಾಗಿ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ವಾದಪತ್ರವನ್ನು ಓದಿ ತಿಳಿದುಕೊಂಡಿರುವುದಿಲ್ಲ. ನೀವು ಈ ದಾವೆಯಲ್ಲಿ ಪ್ರತಿವಾದಪತ್ರವನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪ್ರತಿವಾದಪತ್ರವನ್ನು ಸಲ್ಲಿಸಲು 1ನೇ ಪ್ರತಿವಾದಿಯು ವಕೀಲರಿಗೆ ಮಾಹಿತಿಯನ್ನು ನೀಡಿರುತ್ತಾರೆ. ನನ್ನ ತಾಯಿಯಾದ 1ನೇ ಪ್ರತಿವಾದಿಯು ನನ್ನ ಜೊತೆಯಲ್ಲಿಯೇ ವಾಸಿಸುತ್ತಿದ್ದಾರೆ. 1ನೇ ಪ್ರತಿವಾದಿಯು ಓಡಾಡುತ್ತಾರೆ. 1ನೇ ಪ್ರತಿವಾದಿಯನ್ನು ಈ ದಾವೆಯಲ್ಲಿ ನಾನು ಸಾಕ್ಷಿ ವಿಚಾರಣೆ ಮಾಡಿಸುತ್ತೇನೆ. ದಾವಾಸ್ವತ್ತಿನ ಸಂ.81/4 ಆಗಿದೆ ಮತ್ತು ಅದರ ವಿಸ್ತೀರ್ಣ 25 ಗುಂಟೆ ಆಗಿದೆ. ದಾವಸ್ವತ್ತಿನ ವಿಸ್ತೀರ್ಣ ಒಂಬತ್ತುವರೆ ಗುಂಟೆ ಇದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ದಾವಾಸ್ವತ್ತಿನ ಪೂರ್ವಕ್ಕೆ ಹಳ್ಳ ಮತ್ತು ಉತ್ತರಕ್ಕೆ ಬೋರಯ್ಯನವರ ಸ್ವತ್ತು ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಾವಾಸ್ವತ್ತಿನ ಪಶ್ಚಿಮಕ್ಕೆ ನಿಮಗೆ ಸೇರಿದ ಸ್ವತ್ತು ಮತ್ತು ದಕ್ಷಿಣಕ್ಕೆ ವಾದಿಗೆ ಸೇರಿದ ಸ್ವತ್ತು ಇದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

02. ಈಗ ಸಾಕ್ಷಿಗೆ ನಿಪಿ-15 ರಿಂದ 26 ನ್ನು ತೋರಿಸಿದ್ದು, ಅದು ದಾವಸ್ವತ್ತು ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-15ರಲ್ಲಿ ಕಾಣಿಸುತ್ತಿರುವ ಸಮಾಧಿಯು ಮೂಲವಾದಿಯ ಸಮಾಧಿ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-16ರಲ್ಲಿ ಇರುವ ಸಮಾಧಿಯು ಪಿ. ಡಬ್ಲೂ-1ರವರ ಅಜ್ಜಿಯಾದ ಬೋರಮ್ಮನವರ ಸಮಾಧಿ ಆಗಿರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-17 ರಿಂದ 26ರಲ್ಲಿ ಇರುವ ಸಮಾಧಿಯು ಪಿ. ಡಬ್ಲೂ-

1ರವರ ಅಣ್ಣನಾದ ಲಕ್ಷ್ಮಣ್ ರವರ ಸಮಾಧಿ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ವಾದಿಯು ವರ್ಷಕ್ಕೆ 1 ರಿಂದ 2 ಬಾರಿ ಸದರಿ ಸಮಾಧಿಗಳಿಗೆ ಪೂಜೆಯನ್ನು ಮಾಡುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

03. ದಾವಸ್ವತ್ತಿನಲ್ಲಿ 2 ತೆಂಗಿನ ಮರಗಳು ಇದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಸದರಿ ಸಮಾಧಿಯ ಜಾಗವನ್ನು ಹೊರತುಪಡಿಸಿ ವಾದಿಯು ದಾವಾಸ್ವತ್ತಿನಲ್ಲಿ ವ್ಯವಸಾಯವನ್ನು ಮಾಡುತ್ತಾರೆ ಎಂದರೆ ಸಾಕ್ಷಿಯು ತಾನು ದಾವಾಸ್ವತ್ತಿನಲ್ಲಿ ವ್ಯವಸಾಯವನ್ನು ಮಾಡುತ್ತೇನೆ ಎನ್ನುತ್ತಾರೆ. ಸಮಾಧಿಯನ್ನು ಮಾಡುವ ಸಮಯದಲ್ಲಿ ನಾನು ಯಾವುದೇ ತೊಂದರೆಯನ್ನು ಮಾಡುವುದಿಲ್ಲ, ಹಳ್ಳದ ಕಡೆಯಲ್ಲಿ ನಾವು ಬೆಳೆಯನ್ನು ಬೆಳೆದಿರುವುದಿಲ್ಲ ಮತ್ತು ಅಲ್ಲಿ ಸಮಾಧಿಯನ್ನು ಮಾಡಿರುತ್ತಾರೆ. ವಾದಿಯು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಈಗ ಸಾಕ್ಷಿಗೆ ನಿಪಿ-7ನ್ನು ತೋರಿಸಿದ್ದು, ಅದು ಋಣಭಾರ ಪತ್ರ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-7ರಲ್ಲಿ ದಿ.17-04-1974 ರಂದು 1ನೇ ಪ್ರತಿವಾದಿಯು ಮೂಲ ವಾದಿಗೆ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಕ್ರಯವನ್ನು ಮಾಡಿದ್ದಾರೆ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-7ನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ. ಈ ದಾವೆಯನ್ನು ಸಲ್ಲಿಸಿದ ನಂತರ ನಾನು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಈ ಮೇಲೆ ಹೇಳಿರುವ ಕ್ರಯದ ಬಗ್ಗೆ ಪರಿಶೀಲನೆ ಮಾಡಿದಾಗ ಯಾವುದೇ ಕ್ರಯ ಆಗಿರುವುದಿಲ್ಲ ಎಂದು ಗೊತ್ತಾಯಿತು.

**ಈ ಹಂತದಲ್ಲಿ ಮುಂದುವರೆದ** ಪಾಟೀ **ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**